

# ಅನುಷ್ಕಾ ಪ್ರಾಣಿಪ್ರೀತಿ

ಮದುವೆಯ ಬಳಿಕ ಅನುಷ್ಕಾ ಶರ್ಮಾ ವೃತ್ತಿಜೀವನದ ವೇಗ ಇಳಿಮುಖವಾಗಿದೆಯೆ? ಸದ್ಯಕ್ಕೆ ಬರುತ್ತಿರುವ ಬೇರೆ ನಟಿಯರ ಚಿತ್ರಗಳಿಗೆ ಹೋಲಿಸಿದರೆ 'ಹೌದು' ಎನ್ನಬಹುದು. ಹಾಗೆಂದು ಅನುಷ್ಕಾ ಮನೆಯಲ್ಲೇನೂ ಕುಳಿತಿಲ್ಲ. ಗಂಡನ ಜತೆಗೆ ಓಡಾಟ, ಪಾರ್ಟಿ ಫಂಕ್ಷನ್‌ಗಳು, ಬ್ರ್ಯಾಂಡ್‌ಗಳ ಜಾಹೀರಾತು– ಹೀಗೆ ಆಕೆ ಈಗಲೂ ಬ್ಯುಸಿ. ಅದರ ಮಧ್ಯೆ 2019ರಲ್ಲಿ ಆಕೆಯ 3–4 ಹೊಸ ಸಿನಿಮಾಗಳೂ ಬರುವ ಸುದ್ದಿಗಳಿವೆ. ಅವುಗಳಲ್ಲಿ ಮುಖ್ಯವಾದದ್ದು ಅರ್ಜುನ್ ಕಪೂರ್ ಜೊತೆಗಿನ 'ಕೆನೆಡಾ' ಮತ್ತು 'ಪ್ರೈಸ್‌ಲೆಸ್ ರಿಮೇಕ್'. ಈ ಮಧ್ಯೆ ಅನುಷ್ಕಾ ಮತ್ತು ಕತ್ರೀನಾ ಇಬ್ಬರನ್ನೂ ಸಂಜಯ್ ಲೀಲಾ ಬನ್ಸಾಲಿ ತಮ್ಮ ಹೊಸ ಚಿತ್ರಕ್ಕೆ ಕಾಲ್‌ಷೀಟ್ ಕೇಳಿದ್ದಾರೆಂಬ ಸುದ್ದಿಯೂ ಇದೆ. ಕಳೆದ ವರ್ಷ ಬಿಡುಗಡೆಯಾದ 'ಸುಯಿ ಧಾಗಾ' ಮತ್ತು 'ಝೀರೊ' ಚಿತ್ರಗಳು ಫ್ಲಾಪ್ ಆದ ಹಿನ್ನೆಲೆಯಲ್ಲಿ ಅನುಷ್ಕಾ ಇನ್ನೀಗ ಚಿತ್ರಕಥೆಯ ಕಡೆಗೂ ಸ್ವಲ್ಪ ಗಮನ ಹರಿಸಬೇಕಿದೆ ಎನ್ನುವುದು ಆಕೆಯ ಅಭಿಮಾನಿಗಳ ಅನಿಸಿಕೆ.

ಈ ಮಧ್ಯೆ ಥಾಣೆಯ ಬಳಿ ಅನುಷ್ಕಾ, ಪ್ರಾಣಿ ಪಾಲನಾಲಯ ಮತ್ತು ಪಶು ಆಸ್ಪತ್ರೆಯೊಂದನ್ನು ಸ್ಥಾಪಿಸಲು ಹೊರಟಿದ್ದಾಳೆ. ಕಳೆದ ವರ್ಷವೇ ಐದು ಎಕರೆ ಜಾಗ ತೆಗೆದುಕೊಂಡಿದ್ದರೂ, ಕೃಷಿ ಭೂಮಿಯ ಪರಿವರ್ತನೆಯ ದಾಖಲೆ ಸಿಗಲು ತಡವಾಯಿತಂತೆ. ಈಗ ಆ ಕೆಲಸವೂ ಆಗಿದ್ದು ಆಕೆಯ ತಂದೆ ಇದರ ಉಸ್ತುವಾರಿ ವಹಿಸಲಿದ್ದಾರಂತೆ. ಆ ಜಮೀನಿನಲ್ಲಿ ಅಪ್ಪ–ಅಮ್ಮನಿಗೊಂದು ಬಂಗಲೆ ಕಟ್ಟಲೂ ಅವಳು ನಿರ್ಧರಿಸಿದ್ದಾಳೆ.

■ ಹನಿ

# ಆಮೀರನ 'ಮೊಗಲ್'

ಬಾಲಿವುಡ್‌ನ ಖಾನ್‌ತ್ರಯರಲ್ಲೇ ವಿಶಿಷ್ಟ ಚಿತ್ರಗಳಿಗೆ ಹೆಸರು ಮಾಡಿದಾತ ಅಮೀರ್‌ಖಾನ್. ಆದರೆ ಈ ವರ್ಷ ಆತನ ಹೊಸ ಚಿತ್ರ ನೋಡಲು ಪ್ರೇಕ್ಷಕರು ಕ್ರಿಸ್ಮಸ್‌ವರೆಗೂ ಕಾಯಬೇಕು. ಕ್ರಿಸ್ಮಸ್ ವೇಳೆಗೆ ಆತನ ನಟಿಸಿದ 'ಮೊಗಲ್' ಚಿತ್ರ ತೆರೆ ಕಾಣಲಿದೆ. ಒಂದು ಕಾಲದಲ್ಲಿ ಟಿ ಸಿರೀಸ್ ಕ್ಯಾಸೆಟ್‌ಗಳ ಮೂಲಕ ಸಂಗೀತಲೋಕವನ್ನು ಮೊಗಲ್ ದೊರೆಯಂತೆ ಆಳಿದ ಗುಲ್ಷನ್ ಕುಮಾರ್ ಜೀವನ ಆಧಾರಿತ ಚಿತ್ರವಿದು. ಸಂಗೀತಲೋಕ ಮತ್ತು ಮುಂಬೈನ ಭೂಗತ ದೊರೆಗಳ ನಡುವಣ ಸಖ್ಯದಿಂದಾಗಿ ಗುಂಡಿಗೆ ಬಲಿಯಾದ ಗುಲ್ಷನ್ ಕುಮಾರ್, 90ರ ದಶಕದಲ್ಲಿ ಬಾಲಿವುಡ್‌ಅನ್ನು ಹುಚ್ಚೆಬ್ಬಿಸಿದಂತಹ ಹಾಡುಗಳ ಹಲವು ಕ್ಯಾಸೆಟ್‌ಗಳನ್ನು ನಿರ್ಮಿಸಿದಾತ.

'ಮೊಗಲ್' ಚಿತ್ರದ ಕುರಿತು ಅಮೀರ್ ತುಂಬ ನಿರೀಕ್ಷೆ ಇಟ್ಟುಕೊಂಡಿದ್ದಾನಂತೆ. ಹೊಸ ವರ್ಷದ ಆರಂಭದಲ್ಲಿ ಅಮೀರ್ ಪ್ರಕಟಿಸಿದ ಐದು ನಿರ್ಣಯಗಳಲ್ಲಿ ಎರಡು ಮುಖ್ಯವಾದ ನಿರ್ಣಯಗಳೆಂದರೆ, '2018ರಲ್ಲಿ ಮಾಡಿದ ತಪ್ಪುಗಳಿಂದ ಪಾಠ ಕಲಿಯುತ್ತೇನೆ' ಮತ್ತು 'ನನ್ನ ವೃತ್ತಿಜೀವನದ ಅತ್ಯುತ್ತಮ ಚಿತ್ರವೊಂದನ್ನು ನಿರ್ಮಿಸುತ್ತೇನೆ' ಎನ್ನುವುದು. 'ಥಗ್ಸ್ ಆಫ್ ಹಿಂದೂಸ್ತಾನ್' ಚಿತ್ರದ ಫ್ಲಾಪ್ ಷೋ ಬಳಿಕ ಅಮೀರ್‌ಖಾನ್‌ನ ಈ ಆತ್ಮವಿಮರ್ಶೆ ಹೊರಬಿದ್ದಂತಿದೆ. ಹಾಗೆಯೇ ಜಗತ್ತಿನಾದ್ಯಂತ 2000 ಕೋಟಿ ರೂಪಾಯಿ ಬಾಕ್ಸಾಫೀಸ್ ಕಲೆಕ್ಷನ್ ಮಾಡಿದ 'ದಂಗಲ್' ಚಿತ್ರದ ಯಶಸ್ಸಿನ ಬಳಿಕ, ವೃತ್ತಿಜೀವನದ ಅತ್ಯುತ್ತಮ ಚಿತ್ರ ಮಾಡುವ ಹುಚ್ಚೊಂದು ಆತನನ್ನು ಹೊಕ್ಕಂತಿದೆ. 200 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಿರ್ಮಾಣವಾಗಲಿರುವ 'ಮಹಾಭಾರತ'ದ ಬಗ್ಗೆ ಅಮೀರ್ ಈ ಮಾತನ್ನು ಹೇಳಿರಬಹುದೆ ಎನ್ನುವ ಚರ್ಚೆಯೂ ನಡೆದಿದೆ. ಈ ಚಿತ್ರದಲ್ಲಿ ಅಮೀರ್ ಕೃಷ್ಣನ ಪಾತ್ರ ವಹಿಸಲಿದ್ದು, 'ಬಾಹುಬಲಿ' ಖ್ಯಾತಿಯ ರಾಜಮೌಳಿ ನಿರ್ದೇಶಿಸುತ್ತಿದ್ದಾರೆ.

ಅಂದ ಹಾಗೆ 'ಮೊಗಲ್' ಚಿತ್ರದ ಗುಲ್ಷನ್ ಕುಮಾರ್ ಪಾತ್ರವನ್ನು ಮೊದಲ ಸುದ್ದಿಯಂತೆ ಅಕ್ಷಯ್ ಕುಮಾರ್ ನಿರ್ವಹಿಸಬೇಕಿತ್ತು. ಆದರೆ ಕಾಲ್‌ಷೀಟ್ ಮತ್ತು ಸಂಭಾವನೆಯ ವಿಷಯದಲ್ಲಿ ಅಕ್ಷಯ್ ರಾಜಿಗೆ ಒಪ್ಪದ್ದರಿಂದ ಅದು ಸಾಧ್ಯವಾಗಲಿಲ್ಲವಂತೆ. ಅಮೀರ್ ಖಾನ್, ಅಕ್ಷಯ್‌ಗಿಂತ ಹೆಚ್ಚು ಸಂಭಾವನೆ ಪಡೆಯುವಾತ. ಈ ಚಿತ್ರಕ್ಕೆ ಅಮೀರ್ ಕಡಿಮೆ ಸಂಭಾವನೆಗೆ ಒಪ್ಪಿರಬಹುದೆ ಎನ್ನುವ ಗುಸುಗುಸು ಕೂಡಾ ಇದೆ.

■

